# ಕರ್ನಾಟಕ ವಿಧಾನ ಪರಿಷತ್ತು
## (153ನೇ ಅಧಿವೇಶನ)

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 505(684) |
| ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | **22.07.2024** |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು Saw Mill ಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ; ಇವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವುಗಳೆಷ್ಟು; ಇವುಗಳಿಗೆ ಅನುಮತಿ ನೀಡಲು ಯಾವ ಯಾವ ಮೂಲಭೂತ ಸೌಲಭ್ಯಗಳ ಅವಶ್ಯಕತೆಯಿದೆ; | ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಸ್ಥಳೀಯ ಜಾತಿಯ ಮರಗಳನ್ನು ಕೊಯ್ಯುವ ಸಲುವಾಗಿ ಯಾವುದೇ ಸಾಮಿಲ್ ಪ್ರಾರಂಭಿಸಲು ಅನುಮತಿ ನೀಡಿರುವುದಿಲ್ಲ.<br><br>ವಿದೇಶಗಳಿಂದ ಆಮದು ಮಾಡಿದ ಮರವನ್ನು (Imported wood from other countries) ಮಾತ್ರ ಬಳಸಿ ಮರದ ಪ್ಯಾಕಿಂಗ್ ವಸ್ತುಗಳನ್ನು ತಯಾರಿಸುವ ಷರತ್ತಿಗೆ ಒಳಪಟ್ಟು, ದಾವಣಗೆರೆ ವಿಭಾಗದಲ್ಲಿ ಒಂದು ಸಾಮಿಲ್ ಹಾಗೂ ಕಲಬುರಗಿ ವಿಭಾಗದಲ್ಲಿ ಐದು ಸಾಮಿಲ್ ಪ್ರಾರಂಭಿಸಲು ದಿನಾಂಕ 05.03.2024 ರಂದು ನಡೆದ ಹತ್ತನೇ ರಾಜ್ಯ ಮಟ್ಟದ ಸಭೆಯಲ್ಲಿ ಅನುಮತಿಸಲಾಗಿದೆ.<br><br>ಸಾಮಿಲ್ ಪ್ರಾರಂಭಿಸಲು ಅರ್ಜಿದಾರನು ಸ್ಥಾಪಿಸಲು ಇಚ್ಛಿಸುವ ಜಾಗದ ವಿವರ, ನಗರ ಸಭೆ ವ್ಯಾಪ್ತಿಗೆ ಒಳಪಟ್ಟಲ್ಲಿ ನಿರಾಕ್ಷೇಪಣಾ ಪತ್ರ ಅಥವಾ ಉದ್ಯೋಗ ಪರವಾನಗಿ ಪತ್ರ, ಅಳವಡಿಸಲು ಇಚ್ಛಿಸಿರುವ ಯಂತ್ರಗಳ ಸಂಖ್ಯೆಯ ವಿವರ ಮತ್ತು ಅಶ್ವಶಕ್ತಿಯ ವಿವರಗಳು ಒಳಗೊಂಡ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಂಬಂಧಪಟ್ಟ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬೇಕಿರುತ್ತದೆ.<br><br>ಸದರಿ ಅರ್ಜಿಯನ್ನು ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 163 2(ಎ) ಮತ್ತು 163 (5) ರನ್ವಯ ಇಲಾಖೆಯಲ್ಲಿ ಕ್ಷೇತ್ರ ತಪಾಸಣೆ ಮಾಡಿ, ನಿಯಮಾನುಸಾರ ಅರ್ಹವಿದೆಯೇ ಎಂಬುದರ ಕುರಿತು ಪರಿಶೀಲಿಸಲಾಗುತ್ತದೆ.<br><br>ಭಾರತದ ಸರ್ವೋಚ್ಚ ನ್ಯಾಯಾಲಯವು ಶ್ರೀ ಟಿ ಎನ್ ಗೋದಾವರ್ಮನ್ ತಿರುಮಲ್ಪಾಡ್ ವಿರುದ್ಧ ಭಾರತ ಸರ್ಕಾರ ಮತ್ತಿತರರು ಪ್ರಕರಣದಲ್ಲಿ ರಿಟ್ ಅರ್ಜಿ (ಸಿವಿಲ್) ಸಂಖ್ಯೆ 202/1995 ರಲ್ಲಿ ದಿನಾಂಕ 05.10.2015ರಂದು ಹೊರಡಿಸಿದ ಆದೇಶದನ್ವಯ, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ರಚಿಸಿರುವ "ಮರ ಆಧಾರಿತ ಕೈಗಾರಿಕೆಗಳು (ಸ್ಥಾಪನೆ ಮತ್ತು ನಿಯಂತ್ರಣ) |

| | | |
|---|---|---|
| | | ಮಾರ್ಗಸೂಚಿಗಳು 2016, ದಿನಾಂಕ 22ನೇ ಸೆಪ್ಟಂಬರ್ 2016" ಮತ್ತು ದಿನಾಂಕ 11ನೇ ಸೆಪ್ಟಂಬರ್ 2017ರ ತಿದ್ದುಪಡಿಯನ್ವಯ ರಚಿಸಲಾಗಿರುವ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಮರ ಆಧಾರಿತ ಕೈಗಾರಿಕೆಗಳಿಗೆ ಅನುಮತಿ ನೀಡುವ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ. |
| ಆ) | ವಸತಿ ಪ್ರದೇಶದಲ್ಲಿ ಸಾಮಿಲ್‌ಗಳನ್ನು ಪ್ರಾರಂಭಿಸಲು ಅವಕಾಶವಿದೆಯೇ; ಹಾಗಿದ್ದಲ್ಲಿ, ಅನುಸರಿಸಬೇಕಾದ ನಿಯಮಗಳೇನು; | ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 163 2(ಎ) ರನ್ವಯ ನಗರ ಸಭೆ ಮತ್ತು ಕೈಗಾರಿಕಾ ಪ್ರದೇಶದ ವ್ಯಾಪ್ತಿಯಲ್ಲಿ ಸಾಮಿಲ್‌ಗಳನ್ನು ಸ್ಥಾಪಿಸಲು ಅವಕಾಶವಿರುತ್ತದೆ. ನಗರ ಸಭೆ ಪ್ರದೇಶದಲ್ಲಿ ಸಾಮಿಲ್ ಸ್ಥಾಪಿಸಲು ಸಂಬಂಧಪಟ್ಟ ನಗರ ಸಭೆಯಿಂದ ಉದ್ದಿಮೆ ಪರವಾನಗಿ ಅಥವಾ ನಿರಾಕ್ಷೇಪಣಾ ಪತ್ರ ಪಡೆಯಬೇಕಿರುತ್ತದೆ. |
| ಇ) | ಪ್ರತಿ ವರ್ಷ ವನಮಹೋತ್ಸವ ಆಚರಿಸುವ ಸರ್ಕಾರವು ಮರ ಕಡಿಯುವ Saw Mill ಗಳಿಗೆ ಅನುಮತಿ ನೀಡುವ ಮೂಲಕ ದ್ವಂದ್ವ ನೀತಿ ಅನುಸರಿಸುವ ಬಗ್ಗೆ ಸರ್ಕಾರದ ನಿಲುವೇನು? (ವಿವರ ಒದಗಿಸುವುದು) | ರಾಜ್ಯದಲಿ ಹಸಿರು ಹೊದಿಕೆ ಹೆಚ್ಚಿಸಲು, ಪ್ರತಿ ವರ್ಷ ಅರಣ್ಯ ಪ್ರದೇಶ ಹಾಗೂ ರೈತರ ಜಮೀನುಗಳನ್ನು ಸೇರಿ ಇತರ ಪ್ರದೇಶಗಳಲ್ಲಿಯೂ ಸಹ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಆದರೆ, ರೈತರಿಗೆ ಅವರು ಬೆಳದಂತಹ ಮರುಗಳಿಗೆ ಸೂಕ್ತ ಆದಾಯ ಬರಬೇಕಾದರೆ ಮತ್ತು ಸ್ಥಳೀಯ ಜನರಿಗೆ ಉದ್ಯೋಗ ಸಿಗುವ ದೃಷ್ಟಿಯಿಂದ, ಮರ ಆಧಾರಿತ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಈ ಮರ ಆಧಾರಿತ ಕೈಗಾರಿಕೆಗಳ ಅನುಮತಿ ನೀಡುವ ಬಗ್ಗೆ ಆ ಪ್ರದೇಶದಲ್ಲಿ ಮರಗಳ ಸಂರಕ್ಷಣೆ ಹಾಗೂ ಮರಮುಟ್ಟುಗಳ ಲಭ್ಯತೆ ಆಧಾರದ ಮೇಲೆ ಕರ್ನಾಟಕ ಅರಣ್ಯ ನಿಯಮಾವಳಿ, 1969 ರ ನಿಯಮ 163 2(ಎ) ಮತ್ತು 163 (5) ರನ್ವಯ ಹಾಗೂ ಭಾರತ ಸರ್ಕಾರದ ಮರ ಆಧಾರಿತ ಕೈಗಾರಿಕೆಗಳು (ಸ್ಥಾಪನೆ ಮತ್ತು ನಿಯಂತ್ರಣ) ಮಾರ್ಗಸೂಚಿಗಳು 2016, ದಿನಾಂಕ 22ನೇ ಸೆಪ್ಟೆಂಬರ್ 2016 ಮತ್ತು ದಿನಾಂಕ 11ನೇ ಸೆಪ್ಟೆಂಬರ್ 2017 ರ ತಿದ್ದುಪಡಿಯನ್ವಯ ರಚಿಸಲಾಗಿರುವ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗುತ್ತಿದೆ. |

ಸಂಖ್ಯೆ: ಅಪಜೀ 33 ಎಫ್‌ಡಿಪಿ 2024

Bkhandre

(ಈಶ್ವರ ಬಿ. ಖಂಡ್ರೆ)

ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.